
## ಸುದ್ದಿ ಸಂಚಯ

# ಸಹಸ್ರಮಾನದ ಹೊಸ ಬೆಳಕಾಗಿ ವಿವೇಕಪ್ರಭ

## ೨೦೦೦ ಜನವರಿ ೧ರಂದು 'ವಿವೇಕಪ್ರಭ' ಪತ್ರಿಕೆಯ ಬಿಡುಗಡೆ ಸಮಾರಂಭ

ನೂತನ ಸಹಸ್ರಮಾನಕ್ಕೆ ಪದಾರ್ಪಣೆ ಮಾಡಿದ ಉತ್ಸಾಹ, ಉಲ್ಲಾಸಗಳ ನಡುವೆ ರಾಮಕೃಷ್ಣ ಮಹಾಸಂಘದ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿ ಆರಂಭಗೊಂಡಿರುವ 'ವಿವೇಕಪ್ರಭ' ಕನ್ನಡ ಮಾಸಪತ್ರಿಕೆಯ ಬಿಡುಗಡೆ ಸಮಾರಂಭವು ಮೈಸೂರಿನ ಶ್ರೀರಾಮಕೃಷ್ಣಾಶ್ರಮದ ಕಿಕ್ಕಿರಿದ ಸಭಾಂಗಣದಲ್ಲಿ ೨೦೦೦ ಜನವರಿ ೧ರಂದು ಜರುಗಿತು. ವೇದಘೋಷದೊಂದಿಗೆ ಆ ದಿನ ಸಂಜೆ ೫ ಘಂಟೆಗೆ ಕಾರ್ಯಕ್ರಮ ಆರಂಭಗೊಂಡಿತು. ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾದ ಸ್ವಾಮಿ ಪುರುಷೋತ್ತಮಾನಂದಜೀಯವರ ಸುಶ್ರಾವ್ಯವಾದ ಭಜನೆಯ ನಂತರ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜೀಯವರು ಎಲ್ಲರನ್ನೂ ಸ್ವಾಗತಿಸಿದರು. ಆಶ್ರಮದ ಅಮೃತ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಹಲವಾರು ಯೋಜನೆಗಳ ಬಗ್ಗೆಯೂ ಅವರು ಪ್ರಸ್ತಾಪಿಸಿದರು. ವಿವೇಕಪ್ರಭ ಪತ್ರಿಕೆಯ ಬಿಡುಗಡೆಯಿಂದ ಆರಂಭಗೊಳ್ಳಲಿರುವ ಈ ಮಹೋತ್ಸವ ವರ್ಷಪೂರ್ತಿ ಆಚರಿಸಲಾಗುತ್ತದೆಂದು ತಿಳಿಸಿದರು.

ವಿವೇಕಪ್ರಭ ಪತ್ರಿಕೆಯ ಮೊದಲ ಸಂಚಿಕೆಯನ್ನು ಸ್ವಾಮಿ ಸ್ಮರಣಾನಂದಜಿಯವರು ಬಿಡುಗಡೆಮಾಡುತ್ತಿರುವುದು




ನಂತರ 'ವಿವೇಕಪ್ರಭ' ವಾಸ್ತವವಾಗಲು ಹಾದುಬಂದ ದಾರಿಯ ಸಂಕ್ಷಿಪ್ತ ಪರಿಚಯ ನೀಡುತ್ತ ಪತ್ರಿಕೆಯ ಸಂಪಾದಕರಾದ ಸ್ವಾಮಿ ನಿತ್ಯಸ್ಥಾನಂದಜೀಯವರು, ಎಲ್ಲ ವಿಚಾರಗಳಲ್ಲಿ ಜೀವನಪೋಷಕ ಭಾವನೆಗಳನ್ನು ಜನರಿಗೆ ನೀಡುವುದು ಪತ್ರಿಕೆಯ ಧ್ಯೇಯವಾಗಿದೆ ಎಂದರು. ಪತ್ರಿಕೆಯನ್ನು ಕೊಂಡು, ಓದಿ ಪ್ರೋತ್ಸಾಹಿಸುವ ಓದುಗ ಬಳಗ ಪತ್ರಿಕೆಯ ಗುಣಮಟ್ಟದಷ್ಟೇ ಮುಖ್ಯ ಎಂದು ನುಡಿದರು.

ಪತ್ರಿಕೆಯನ್ನು ಬಿಡುಗಡೆ ಮಾಡಿದ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿ ಸ್ವಾಮಿ ಸ್ಮರಣಾನಂದಜೀಯವರು, ಸ್ವಾಮಿ ವಿವೇಕಾನಂದರು ದೇಶದ ಹಲವು ಭಾಷೆಗಳಲ್ಲಿ ಪತ್ರಿಕೆಯು ಪ್ರಕಟವಾಗಿ ಉದಾತ್ತ ಧಾರ್ಮಿಕ ಭಾವನೆಗಳು ಎಲ್ಲೆಲ್ಲಿಯೂ ಹರಡುವಂತಾಗಬೇಕೆಂದು ಅಭಿಪ್ರಾಯ ಪಟ್ಟಿದ್ದರು ಎಂದು ನುಡಿದರು. ಸ್ವಾಮಿ ವಿವೇಕಾನಂದರನ್ನು ಅನೇಕರು ತಪ್ಪಾಗಿ ಗ್ರಹಿಸುತ್ತಿದ್ದಾರೆ ; ಅವರ ನಿಜವಾದ ಸಂದೇಶವನ್ನು ಯಥಾರ್ಥವಾಗಿ ಪತ್ರಿಕೆಗಳ ಮೂಲಕ ಜನರಿಗೆ ನೀಡಬೇಕಾಗಿದೆ ಎಂದು ಅವರು ಹೇಳಿದರು. ಈಗಿನ ಕಾಲದಲ್ಲಿ ಜನತೆ ಪತ್ರಿಕೆಯಲ್ಲಿ ಬಂದರೇನೆ ಸ್ವೀಕರಿಸುವ ಮನೋಭಾವವುಳ್ಳವರು; ಆದ್ದರಿಂದ ಪತ್ರಿಕೆಯ ಆವಶ್ಯಕತೆ ಇದೆ ಎಂದು ಹೇಳಿ ಈ ಪತ್ರಿಕೆಯು ಈ ಶತಮಾನವನ್ನೂ ಮೀರಿ ಮುಂದುವರಿಯಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಜಿ.ಎಸ್. ಶಿವರುದ್ರಪ್ಪನವರು ಮಾತನಾಡಿ, ರಾಮಕೃಷ್ಣ ಮಹಾಸಂಘದ ಕಾರ್ಯಕ್ರಮ ವಿವರಗಳನ್ನು ನೀಡುತ್ತ, ಪ್ರಸ್ತುತ ಸನ್ನಿವೇಶದಲ್ಲಿ ಅದರ ಮಹತ್ತ್ವವನ್ನು ಪ್ರಶಂಸಿಸಿದರು. ಕುಸಿಯುತ್ತಿರುವ ಮಾನವೀಯ ಮೌಲ್ಯಗಳನ್ನು ಪ್ರಸ್ತಾಪಿಸಿ ಇಂತಹ ಪತ್ರಿಕೆಗಳ ಆವಶ್ಯಕತೆಯನ್ನು ಒತ್ತಿಹೇಳಿದರು. ಈ ಪತ್ರಿಕೆಯಲ್ಲಿ ಎಲ್ಲ ಧರ್ಮಗಳನ್ನೂ ಕುರಿತಾದ ಲೇಖನಗಳು ಇರಬೇಕೆಂದು ಆಶಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೆಂಗ

ಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜೀಯವರು, ಕನ್ನಡದಲ್ಲಿ ಪತ್ರಿಕೆಯನ್ನು ಪ್ರಾರಂಭಿಸಲು ಹಿಂದೆ ನಡೆದ ಕೆಲವು ಪ್ರಯತ್ನಗಳನ್ನು ಕುರಿತು ಹೇಳಿದರು ; ಹಾಗೂ ಎಲ್ಲರೂ ಮುಂದೆ ಬಂದು ಹೆಚ್ಚಿನ ಸಂಖ್ಯೆಯಲ್ಲಿ ಚಂದಾದಾರರಾಗಿ ಈ ಪತ್ರಿಕೆಗೆ ಪ್ರೋತ್ಸಾಹ ನೀಡಬೇಕೆಂದು ಜನತೆಗೆ ಕರೆ ನೀಡಿದರು.


ಸ್ವಾಮಿ ಮುಕ್ತಿದಾನಂದರ ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

**ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಮಹಾರಾಜ್‌ರವರ ಮೈಸೂರು ಮತ್ತು ಬೆಂಗಳೂರು ಭೇಟಿ**

ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ರಂಗನಾಥಾನಂದಜಿಯವರು 19-2-2000, ಶನಿವಾರ ಬೆಳಿಗ್ಗೆ ಮೈಸೂರಿಗೆ ಆಗಮಿಸಲಿದ್ದಾರೆ. 23-2-2000, ಬುಧವಾರದವರೆಗೂ ಅವರು ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಇರುತ್ತಾರೆ. 23-2-2000ದಂದು ಬೆಳಿಗ್ಗೆ ಪೂಜ್ಯ ಸ್ವಾಮೀಜಿಯವರು ಬೆಂಗಳೂರಿಗೆ ಹೋಗಿ ಅಲ್ಲಿಯ ರಾಮಕೃಷ್ಣ ಮಠದಲ್ಲಿ 29-2-2000 ಮಂಗಳವಾರದ ಬೆಳಗಿನವರೆಗೂ ಇರುತ್ತಾರೆ. ದೀಕ್ಷೆ-ದರ್ಶನಾರ್ಥಿಗಳು ವಿವರಗಳಿಗಾಗಿ, ಮೈಸೂರು ಅಥವಾ ಬೆಂಗಳೂರು ಆಶ್ರಮವನ್ನು ಸಂಪರ್ಕಿಸಬೇಕಾಗಿ ವಿನಂತಿ.

# ಸ್ವಾಮಿ ವಿವೇಕಾನಂದ ಭವನ

## ಚೆನ್ನೈನಲ್ಲಿನ ಐತಿಹಾಸಿಕ ಸ್ಮಾರಕ



**‘ಸಮಾಜಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳಲ್ಲಿ ರಾಮಕೃಷ್ಣ ಮಿಶನ್ ಎವರೆಸ್ಟ್ ಪರ್ವತದಂತೆ’** ಎಂದು ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿ ಶ್ರೀಯುತ ಕರುಣಾನಿಧಿಯವರು ನುಡಿದರು. ಅವರು ಚೆನ್ನೈನಲ್ಲಿರುವ ನವೀಕೃತ ವಿವೇಕಾನಂದ ಭವನವನ್ನು ಉದ್ಘಾಟಿಸುತ್ತಿದ್ದರು.

ಸ್ವಾಮಿ ವಿವೇಕಾನಂದರು ತಮ್ಮ ಚಿಕಾಗೋ ಉಪನ್ಯಾಸದ ನಂತರ ಪಶ್ಚಿಮ ದೇಶಗಳಲ್ಲಿ ೪ ವರ್ಷ ವೇದಾಂತದ ಪ್ರಚಾರ ಮಾಡಿ ಭಾರತಕ್ಕೆ ಮರಳಿ ಚೆನ್ನೈನಲ್ಲಿ ಅವರ ಉಪಸ್ಥಿತಿ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆಯೇ ಆಗಿದೆ. ಆಗ ಸ್ವಾಮಿಜೀಯವರಿಗೆ ತಂಗಲು ಅವರ ಶಿಷ್ಯರಾಗಿದ್ದ ಶ್ರೀ ಬಿಳಿಗಿರಿ ಅಯ್ಯಂಗಾರ್ ಅವರು ಮರೀನಾದಲ್ಲಿರುವ ತಮ್ಮ ಭವನದಲ್ಲಿ ವ್ಯವಸ್ಥೆ ಮಾಡಿದರು. ಈ ಭವನವನ್ನು ಮೊದಲು ಐಸ್ ಹೌಸ್ ಎಂದು ಕರೆಯುತ್ತಿದ್ದರು. ಅನಂತರ ಅದನ್ನು ತಾವು ಕೊಂಡುಕೊಂಡಮೇಲೆ ಬಿಳಿಗಿರಿ ಐಯ್ಯಂಗಾರ್ ಕ್ಯಾಸಲ್ ಕರ್ನೆನ್ ಎಂದು ಹೆಸರಿಸಿದರು. ೧೯೬೩ರಲ್ಲಿ ತಮಿಳುನಾಡು ಸರ್ಕಾರವು ವಿವೇಕಾನಂದ ಇಲ್ಲಂ ಎಂದು ಹೆಸರನ್ನು ಕೊಟ್ಟಿತು.

ಐತಿಹಾಸಿಕವಾಗಿ ಮಹತ್ತ್ವವಾಗಿರುವ ಈ ಭವನದಲ್ಲಿಯೇ ದಕ್ಷಿಣದ ಪ್ರಪ್ರಥಮ ರಾಮಕೃಷ್ಣಮಠದ ಶಾಖೆ ಆರಂಭವಾದದ್ದು. ನಂತರ ಕಾಲಾಂತರದಲ್ಲಿ ಸರ್ಕಾರದ ಕೈವಶವಾಗಿದ್ದ ಈ ಭವನವನ್ನು ಬಹಳ ಕಾಲದ ನಿರೀಕ್ಷೆಯ ನಂತರ ೧೯೯೭ರಲ್ಲಿ ತಮಿಳುನಾಡಿನ ಸರ್ಕಾರ ರಾಮಕೃಷ್ಣ ಮಠಕ್ಕೆ ಹಸ್ತಾಂತರಿಸಿತು.

ಜೀರ್ಣಗೊಂಡಿದ್ದ ಈ ಭವನದ ದುರಸ್ತಿಗೆ ಆಗಲೇ ೫೦ಲಕ್ಷ ರೂಗಳು ತಗಲಿದೆ. ಮೂರು ಅಂತಸ್ತಿನ ಈ ಭವನದಲ್ಲಿ ಭಾರತೀಯ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಗೆ ಶ್ರೀರಾಮಕೃಷ್ಣ ವಿವೇಕಾನಂದರ ಕೊಡುಗೆಯನ್ನು ನಿರೂಪಿಸುವ ಸುಂದರವಾದ ವರ್ಣಚಿತ್ರಗಳ ಪ್ರದರ್ಶನವಿದೆ. ಲಲಿತ ಕಲಾ ಅಕಾಡೆಮಿಯ ಶ್ರೀಯುತ ಪುರುಷೋತ್ತಮ ಕಾರಂತ ಹಾಗೂ ಅವರ ಶಿಷ್ಯರು ಈ ಚಿತ್ರಗಳನ್ನು ಬಿಡಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆಂಬುದು ಕನ್ನಡಿಗರಿಗೆ ಹೆಮ್ಮೆ ತರುವ ವಿಷಯ.

ಮೊದಲನೆಯ ಹಂತದ ವರ್ಣಚಿತ್ರಗಳ ಪ್ರದರ್ಶನವನ್ನು ಈ ಭವನದಲ್ಲಿ ಕಳೆದ ಡಿಸೆಂಬರ್ ೨೦ರಂದು ಬೆಳಿಗ್ಗೆ ಉದ್ಘಾಟಿಸಲಾಯಿತು. ತಮ್ಮ ಸ್ವಾಗತ ಭಾಷಣದಲ್ಲಿ ರಾಮಕೃಷ್ಣ ಮಠ ಮತ್ತು ಮಿಶನ್ನಿನ ಪ್ರಧಾನ ಕಾರ್ಯದರ್ಶಿ ಸ್ವಾಮಿ ಸ್ಮರಣಾನಂದಜೀಯವರು, ಸ್ವಾಮಿ ವಿವೇಕಾನಂದರಂತಹ ಅಮೂಲ್ಯ ರತ್ನವನ್ನು ಗುರುತಿಸಿ ಅವರ ಪಶ್ಚಿಮದ ಪ್ರವಾಸಕ್ಕೆ ನೆರವಾಗಿದ್ದರಲ್ಲಿ ಚೆನ್ನೈನ ಪಾತ್ರ ಮಹತ್ತ್ವದ್ದು ಎಂದರು. ತಮಿಳು ನಾಡಿನ ಮಾನ್ಯ ಮುಖ್ಯಮಂತ್ರಿ ಶ್ರೀಯುತ ಕರುಣಾನಿಧಿಯವರು ಸ್ವಾಮಿ ವಿವೇಕಾನಂದರ ಕೃತಿಗಳಿಂದ ವಿಪುಲವಾಗಿ ಉದ್ಧರಿಸುತ್ತಾ ರಾಮಕೃಷ್ಣ ಮಿಶನ್ನಿನ ಸೇವಾಕಾರ್ಯಗಳನ್ನು ಪ್ರಶಂಸಿಸಿದರು. ಆ ಸಂದರ್ಭದಲ್ಲಿ ತಮಿಳು ನಾಡಿನ ಶಿಕ್ಷಣ ಮಂತ್ರಿಗಳಾದ ಪ್ರೊ. ಕೆ. ಅಂಬಳಗನ್ ಅವರು ಸ್ವಾಮಿ ವಿವೇಕಾನಂದರ ಮೇಲೆ ಬರೆದಿರುವ ಒಂದು ಕಿರು ಹೊತ್ತಗೆಯನ್ನು ಬಿಡುಗಡೆ ಮಾಡಲಾಯಿತು.

ಈ ಭವನದ ನೆಲಮಾಳಿಗೆಯಲ್ಲಿ ಸ್ವಾಮಿ ವಿವೇಕಾನಂದರ ಮತ್ತು ಭಾರತೀಯ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಅಧ್ಯಯನಕ್ಕಾಗಿ ಒಂದು ಸಂಶೋಧನಾ ಕೇಂದ್ರವನ್ನೂ ಮತ್ತು ಅದಕ್ಕೆ ನೆರವಾಗುವ ಆಡಿಯೊ-ವೀಡಿಯೊ ಟೇಪ್‌ಗಳನ್ನೊಳಗೊಂಡ ಒಂದು ಸುಸಜ್ಜಿತವಾದ ಗ್ರಂಥಾಲಯವನ್ನೂ ತೆರೆಯುವ ಯೋಜನೆಯನ್ನು ರಾಮಕೃಷ್ಣಮಠ, ಚೆನ್ನೈ, ಹಮ್ಮಿಕೊಂಡಿದೆ.

## ಆಂಧ್ರಪ್ರದೇಶದಲ್ಲಿ ಚಂಡಮಾರುತದಿಂದ ಸಂತ್ರಸ್ತರಿಗೆ ಪುನರ್ವಸತಿಯ ಯೋಜನೆ



*ವಿವೇಕಾನಂದ ಸೇತುವೆ ಮತ್ತು ವಿವೇಕಾನಂದ ಪ್ರತಿಮೆಯ ದೃಶ್ಯ*

೧೯೯೬ ನವೆಂಬರ್‌ನಲ್ಲಿ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಚಂಡಮಾರುತದ ಹಾವಳಿಯಿಂದಾಗಿ ಸಾವಿರಾರು ಜನರು ಮನೆ ಮಠ ಕಳೆದುಕೊಳ್ಳಬೇಕಾಯಿತು. ರಾಮಕೃಷ್ಣ ಮಿಷನ್ ಕೂಡಲೆ ಪರಿಹಾರ ಕಾರ್ಯವನ್ನು ಪ್ರಾರಂಭಿಸಿ ಹಳ್ಳಿಯ ಜನರಿಗಾಗಿ ಪುನರ್ವಸತಿಯ ವ್ಯವಸ್ಥೆಯನ್ನು ಮಾಡಿತು. ಶಾಲೆಗಳನ್ನೂ ರಕ್ಷಣಾ ಸ್ಥಳಗಳನ್ನೂ ಕಟ್ಟಿಸಿಕೊಟ್ಟಿತು. ಈ ಹಳ್ಳಿಗಳೆಲ್ಲವೂ ಗೌತಮೀ ನದಿಯ ಒಂದು ದ್ವೀಪಪ್ರದೇಶದಲ್ಲಿದೆ. ಅಲ್ಲಿಯ ಜನರ ಸಾರಿಗೆ ಸಂಪರ್ಕದ ಅನುಕೂಲಕ್ಕಾಗಿ ಒಂದು ಸೇತುವೆಯನ್ನು ನಿರ್ಮಿಸುವ ಬೃಹತ್ ಯೋಜನೆಯನ್ನು ಹಾಕಿಕೊಂಡು ಇದೀಗ ಅದರ ಕಾರ್ಯ ಸಮಾಪ್ತಿಗೊಂಡಿದೆ. ಇದರ ರೂ.೩.೧೬ ಕೋಟಿ ವೆಚ್ಚದ ಅರ್ಧಭಾಗವನ್ನು ಆಂಧ್ರ ಪ್ರದೇಶ ಸರ್ಕಾರವು ನೀಡಿದೆ. ಸೇತುವೆಯ ಪ್ರವೇಶ ಸ್ಥಳದಲ್ಲಿ ಒಂಬತ್ತುವರೆ ಅಡಿ ಎತ್ತರದ ಸ್ವಾಮಿ ವಿವೇಕಾನಂದರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ.

ಈ ಸೇತುವೆಯು ೨೦೦೦ ಜನವರಿ ೧೨ರಂದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎನ್. ಚಂದ್ರಬಾಬು ನಾಯ್ಡು ಅವರಿಂದ ಉದ್ಘಾಟಿಸಲ್ಪಟ್ಟಿತು. ಲೋಕಸಭೆಯ ಅಧ್ಯಕ್ಷರಾದ ಶ್ರೀ ಜಿ.ಎಂ.ಸಿ. ಬಾಲಯೋಗಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಇನ್ನೂ ಕೆಲವು ಮಂತ್ರಿಗಳು ವಿಶೇಷ ಅತಿಥಿಗಳಾಗಿ ಆಗಮಿಸಿದ್ದರು. ರಾಮಕೃಷ್ಣ ಮಿಷನ್ನಿನ ಅನೇಕ ಸಾಧುಗಳೂ ಉಪಸ್ಥಿತರಿದ್ದರು.

## ತಿರುವಾರೂರಿನಲ್ಲಿ ಭಕ್ತಸಮ್ಮೇಳನ

ತಮಿಳುನಾಡಿನಲ್ಲಿರುವ ತಿರುವಾರೂರು ಒಂದು ಪುರಾತನ ನಗರ. ಅಲ್ಲಿ ಪ್ರಸಿದ್ಧ ಶಿವನ ದೇವಾಲಯವಿದೆ. ಕರ್ನಾಟಕ ಸಂಗೀತದ ತ್ರಿಮೂರ್ತಿಗಳಾದ ತ್ಯಾಗರಾಜ, ಶ್ಯಾಮಾಶಾಸ್ತ್ರಿ ಮತ್ತು ಮುತ್ತುಸ್ವಾಮಿ ದೀಕ್ಷಿತರು ಇಲ್ಲಿಯೇ ಜನಿಸಿದುದು.

ಈ ಐತಿಹಾಸಿಕ ಮಹತ್ವದ ಸ್ಥಳದಲ್ಲಿ ೧೯೯೯ ಡಿಸೆಂಬರ್ ೨೩ರಿಂದ ೨೫ರವರೆಗೆ ಶ್ರೀ ರಾಮಕೃಷ್ಣ ಭಕ್ತಸಮ್ಮೇಳನವನ್ನು ಏರ್ಪಡಿಸಲಾಯಿತು. ಈ ಭಾಗದಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಯಾವ ಕೇಂದ್ರವೂ ಇಲ್ಲದಿರುವುದರಿಂದ ಶ್ರೀರಾಮಕೃಷ್ಣ-ಶಾರದಾದೇವಿ-ವಿವೇಕಾನಂದರ ಆಧ್ಯಾತ್ಮಿಕ ಭಾವನೆಗಳನ್ನು ಜನಸಾಮಾನ್ಯರಲ್ಲಿ ಹರಡಲು ಈ ಸಮ್ಮೇಳನವನ್ನು ಹಮ್ಮಿಕೊಳ್ಳಲಾಯಿತು. ಇಂತಹ ಸಮ್ಮೇಳನಗಳು ಸ್ಥಳೀಯ ಭಕ್ತರ ಸಹಕಾರದೊಂದಿಗೆ ತಮಿಳುನಾಡಿನ ವಿವಿಧ ಭಾಗಗಳಲ್ಲಿ ಪ್ರತಿ ವರ್ಷವೂ ನಡೆಯುತ್ತದೆ.

ತಿರುವಾರೂರಿನಲ್ಲಿ ನಡೆದ ಮೂರು ದಿನಗಳ ಈ ಸಮ್ಮೇಳನದಲ್ಲಿ ಸುಮಾರು ೮೦೦ಭಕ್ತರು ಭಾಗವಹಿಸಿದ್ದರು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿ, ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಹಾಗೂ ಇನ್ನೂ ಅನೇಕ ಸಾಧುಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಭಜನೆ, ಸಂಕೀರ್ತನೆ, ಉಪನ್ಯಾಸಗಳು, ಪರಸ್ಪರ ವಿಚಾರ ವಿನಿಮಯ, ಸಾಂಸ್ಕೃತಿಕ ಕಾರ್ಯಕ್ರಮಗಳು ಸಮ್ಮೇಳನದ ಮುಖ್ಯಾಂಶಗಳಾಗಿದ್ದವು. ಭಾಗವಹಿಸಿದವರೆಲ್ಲರೂ ಅತ್ಯಂತ ಸಂತೃಪ್ತಿಯ ಅನುಭವವನ್ನು ಪಡೆದುದು ಸಮ್ಮೇಳನದ ಯಶಸ್ಸನ್ನು ಸೂಚಿಸುತ್ತದೆ.

## ಕರ್ನಾಟಕದಾದ್ಯಂತ ವಿವೇಕಪ್ರಭ ಪತ್ರಿಕೆಯ ಬಿಡುಗಡೆ ಸಮಾರಂಭಗಳು

ಜನವರಿ ತಿಂಗಳಿನಲ್ಲಿ ಕರ್ನಾಟಕದಾದ್ಯಂತ ರಾಮಕೃಷ್ಣ ಮಹಾಸಂಘದ ಶಾಖಾಕೇಂದ್ರಗಳಲ್ಲಿ ಮತ್ತು ಖಾಸಗಿ ಕೇಂದ್ರಗಳಲ್ಲಿ ವಿವೇಕಪ್ರಭ ಪತ್ರಿಕೆಯ ಬಿಡುಗಡೆ ಸಮಾರಂಭಗಳು ಜರುಗಿದವು. ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದಲ್ಲಿ ಮತ್ತು ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದಲ್ಲಿ ೨೦೦೦ ಜನವರಿ ೧ ರಂದು ಸ್ವಾಮಿ ರಾಘವೇಶಾನಂದಜಿಯವರು ಪತ್ರಿಕೆಯನ್ನು ಬಿಡುಗಡೆಮಾಡಿದರು. ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಸ್ವಾಮಿ ಪೂರ್ಣಕಾಮಾನಂದಜಿಯವರು ಪತ್ರಿಕೆಯ ಬಿಡುಗಡೆಯನ್ನು ನೆರವೇರಿಸಿದರು. ಇದಲ್ಲದೆ ದಾವಣಗೆರೆ, ಕೊಳ್ಳೇಗಾಲ, ಶಿರಸಿ, ಭದ್ರಾವತಿ, ಕೊಪ್ಪ, ತುಮಕೂರು, ಶಿರಾ, ಕುಣಿಗಲ್, ಮಾಗಡಿ, ಗದಗ, ಗೋಕಾಕ್, ಬಿಜಾಪುರ, ಬೆಳಗಾವಿ, ಮಧುಗಿರಿ, ಬಾರಕೂರು, ಪಾವಗಡ, ಚಿತ್ರದುರ್ಗ, ರಂಗೇನಹಳ್ಳಿ, ಬಳ್ಳಾರಿ ಮತ್ತು ಕುಡಿತಿನಿಗಳಲ್ಲಿರುವ ಖಾಸಗಿ ರಾಮಕೃಷ್ಣ ಆಶ್ರಮಗಳಲ್ಲಿ ಮತ್ತು ಭಕ್ತ ಸಂಘಗಳಲ್ಲಿ ವಿವೇಕಪ್ರಭ ಪತ್ರಿಕೆಯನ್ನು ಸಾಧುಶ್ರೇಷ್ಠರು, ಹಾಗೂ ಆಯಾ ಪ್ರದೇಶದ ಗಣ್ಯವ್ಯಕ್ತಿಗಳು ಬಿಡುಗಡೆ ಮಾಡಿದರು. ಈ ಸಮಾರಂಭಗಳನ್ನು ಆಯೋಜಿಸಿದ ಕಾರ್ಯಕರ್ತರಿಗೆಲ್ಲ ಹೃತ್ಪೂರ್ವಕ ಕೃತಜ್ಞತೆಗಳನ್ನು ಈ ಮೂಲಕ ಸಲ್ಲಿಸುತ್ತಿದ್ದೇವೆ